**ಮೂ.ದಾ.ನಂ. 38/2018**

ಡಿ.ಡಬ್ಲ್ಯು.1

(ಇಂದು ದಿನಾಂಕ: **14-10-2025** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲುಃ ಶ್ರೀ. ಪಿ.ಜಿ.ಎಚ್. ವಕೀಲರಿಂದಃ**

ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿ ಸದ್ರಿ ಭಾವಚಿತ್ರದಲ್ಲಿ ಕಾಣುವ ಮನೆಯು ವಾದಿಯ ಮನೆ ಎಂದರೆ ಸರಿ. ಸದ್ರಿ ಭಾವಚಿತ್ರವನ್ನು ಸಾಕ್ಷಿಯು ಒಪ್ಪಿಕೊಂಡ ಮೇರೆಗೆ ಅದನ್ನು **ನಿ.ಪಿ.11** ಎಂದು ಗುರುತಿಸಲಾಯಿತು.

ಸಾಕ್ಷಿಗೆ ಇನ್ನೋಂದು ಭಾವಚಿತ್ರವನ್ನು ತೋರಿಸಲಾಗಿ ಸದ್ರಿ ಭಾವಚಿತ್ರದಲ್ಲಿ ಕಾಣುವ ವಿದ್ಯುತ್ ಕಂಬವು ವಾದಿಯ ಮನೆಯ ಮೇಲುಗಡೆ ಇರುವ ರಸ್ತೆಯಲ್ಲಿ ಇರುವ ವಿದ್ಯುತ್ ಕಂಬ ಎಂದರೆ ಸರಿ. ಸದ್ರಿ ಭಾವಚಿತ್ರವನ್ನು ಸಾಕ್ಷಿಯು ಒಪ್ಪಿಕೊಂಡ ಮೇರೆಗೆ ಅದನ್ನು **ನಿ.ಪಿ.12** ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮೂರು ಭಾವಚಿತ್ರಗಳನ್ನು ತೋರಿಸಲಾಗಿ, ಸದ್ರಿ ಭಾವಚಿತ್ರಗಳಲ್ಲಿ ವಾದಿಯಮನೆಯ ಮೇಲುಗಡೆ ಎ.ಪಿ.ಎಮ್.ಸಿ ರಸ್ತೆಯಿಂದ ವಾದಿಯ ಮನೆಯ ಮೇಲುಗಡೆ ಹಾದು ಹೋದ ವಿದ್ಯುತ್ ತಂತಿಗಳ ಭಾವಚಿತ್ರ ಎಂದರೆ ಸರಿ. ಸದ್ರಿ ಭಾವಚಿತ್ರಗಳನ್ನು ಸಾಕ್ಷಿಯು ಒಪ್ಪಿಕೊಂಡ ಮೇರೆಗೆ ಅವುಗಳನ್ನು ಒಟ್ಟಾಗಿ **ನಿ.ಪಿ.13** ಎಂದು ಗುರುತಿಸಲಾಯಿತು.

ಸಾಕ್ಷಿಗೆ ಇನ್ನೋಂದು ಭಾವಚಿತ್ರವನ್ನು ತೋರಿಸಲಾಗಿ ಸದ್ರಿ ಭಾವಚಿತ್ರದಲ್ಲಿ ಕಾಣುವ ವಿದ್ಯುತ್ ಕಂಬವು ಕಾಣುತ್ತದೆ ಅದರೆ ಅದು ಎಲ್ಲಿಯ ಭಾವಚಿತ್ರ ಎಂದು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಸಾಕ್ಷಿಗೆ ಎರಡು ಭಾವಚಿತ್ರಗಳನ್ನು ತೋರಿಸಲಾಗಿ, ಸದ್ರಿ ಭಾವಚಿತ್ರಗಳಲ್ಲಿ ಇರುವ ಮನೆಗಳ ಇರುವಿಕೆಯ ಕುರಿತು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

**ಮೂ.ದಾ.ನಂ. 38/2018**

ಡಿ.ಡಬ್ಲ್ಯು.1

**(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ